(ಈ) ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಉಪನ್ಯಾಸಕರ ಹುದ್ದೆಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ತುಂಬಲಾಗಿದೆ.

(ಉ) ಮೇಲಿನ (ಈ)ಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗ್ರಾಮೀಣ ಪಶು ಆಸ್ಪತ್ರೆ ಕೇಂದ್ರ ರಾಣೆಬೆನ್ನೂರು

೧೩೦೫. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಪಶುಸಂಗೋಪನಾ ಹಾಗೂ ಪಶುವೈದ್ಯಸೇವಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿರುವ ಪಶು ಆಸ್ಪತ್ರೆ ಗ್ರಾಮೀಣ ಪಶು ಆಸ್ಪತ್ರೆ ಕೇಂದ್ರ ಮತ್ತು ಕೃತಕ ಗರ್ಭಧಾರಣೆ ಕೇಂದ್ರಗಳ ಸಂಖ್ಯೆ ಎಷ್ಟು ?

(ಆ) ಆಸ್ಪತ್ರೆಗಳಲ್ಲಿ ಎಲ್ಲಾ ವರ್ಗಗಳ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

(ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಹಾಗೂ ಕಟ್ಟಡ ಇಲ್ಲದೆ ಇರುವ ಕಡೆ ಆಸ್ಪತ್ರೆ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು ?

ಶ್ರೀ ಸಿದ್ಧರಾಮಯ್ಯ (ಪಶು ಸಂಗೋಪನಾ ಹಾಗು ಪಶುವೈದ್ಯ ಸೇವಾ ರಾಜ್ಯ ಮಂತ್ರಿಗಳು)—

(ಅ)

೧	ಪಶುವೈದ್ಯ ಆಸ್ಪತ್ರೆ	...	ಇಲ್ಲ
೨	ಪಶುವೈದ್ಯ ಶಾಲೆ	...	೩
೩	ಗ್ರಾಮೀಣ ಪಶುವೈದ್ಯಶಾಲೆ	...	೬
೪	ಪಶುಚಿಕಿತ್ಸಾ ಕೇಂದ್ರ	...	೧
೫	ಕೃತಕ ಗರ್ಭಧಾರಣಾ ಕೇಂದ್ರ	...	೧
		ಒಟ್ಟು	೧೨

(ಆ) ಆಸ್ಪತ್ರೆಗಳಲ್ಲಿ ಎಲ್ಲಾ ವರ್ಗಗಳ ಖಾಲಿ ಇರುವ ಹುದ್ದೆಗಳ ಸಂಖ್ಯೆ—೮

(ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮಗಳು.—

(ಅ) ನೂರು (೧೦೦) ಪಶುವೈದ್ಯರ ನೇಮಕಾತಿಗಾಗಿ ಲೋಕಸೇವಾ ಆಯೋಗಕ್ಕೆ ಬೇಡಿಕೆ ಸಲ್ಲಿಸಲಾಗಿದೆ.

(ಆ) ಪಶು ಪರೀಕ್ಷಕರ ಮತ್ತು ಔಷಧಿ ವಿಶ್ರಾಣಕಾರರ ವರ್ಗೀಕರಣ ಮತ್ತು ನೇಮಕಾತಿಯ ಬಗ್ಗೆ ತಿದ್ದುಪಡಿಯನ್ನು ಹೊರಡಿಸಲು ಪ್ರಸ್ತಾಪಿಸಲಾಗುತ್ತಿದೆ. ತಿದ್ದುಪಡಿ ಜಾರಿಗೆ ಬಂದಮೇಲೆ ಖಾಲಿ ಇರುವ ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಸರ್ಕಾರದ ವತಿಯಿಂದ ಪಶುವೈದ್ಯ ಆಸ್ಪತ್ರೆ ಕಟ್ಟಡಗಳನ್ನು ನಿರ್ಮಿಸಲಾಗುತ್ತಿಲ್ಲ. ಆದರೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಮತ್ತು ಜಿಲ್ಲಾ ಉಪಯೋಜನೆಗಳಲ್ಲಿ ಮಾತ್ರ ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳು

೧೩೬೫. ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ) —ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿರುವ ಉರ್ದು ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ?

(ಆ) ಉರ್ದು ಪ್ರಾಥಮಿಕ ಶಾಲೆಗಳಲ್ಲಿನ ಕನ್ನಡ ಶಿಕ್ಷಕರ ಹುದ್ದೆಗಳೆಷ್ಟು ?

(ಇ) ಉರ್ದು ಪ್ರಾಥಮಿಕ ಶಾಲೆಗಳಲ್ಲಿನ ಕನ್ನಡ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

(ಅ) ಏರ್ಪಿ

(ಆ) ೧೦೪

೩) ಉರ್ದು ಶಾಲೆಗಳಲ್ಲಿನ ಕನ್ನಡ ಶಿಕ್ಷಕರ ಹುದ್ದೆಗಳನ್ನು ನಿಯೋಜನೆ ಮಾಡುವ ಮೂಲಕ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ರಾಣೆಬೆನ್ನೂರು ತಾಲ್ಲೂಕಿನ ಕುಪ್ಪೇಲೂರು ಮತ್ತು ಲಿಂಗದಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ

೧೫೦೭. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಎ) ರಾಣೆಬೆನ್ನೂರು ತಾಲ್ಲೂಕಿನ ಕುಪ್ಪೇಲೂರು ಮತ್ತು ಲಿಂಗದಹಳ್ಳಿ ಗ್ರಾಮಗಳಿಗೆ ನೀರು ಸರಬರಾಜು ಯೋಜನೆಯನ್ನು ಒದಗಿಸುವ ಪ್ರಸ್ತಾವನೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಬಿ) ಈ ಗ್ರಾಮಗಳಲ್ಲಿಯ ಅಂತರ್ಜಲ ಮೂಲಗಳ ಬಗ್ಗೆ ಭೂಗರ್ಭ ಶಾಸ್ತ್ರಜ್ಞರ ವರದಿ ಗಳೇನು ?

(ಸಿ) ಈ ಎರಡೂ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಸಂಯುಕ್ತವಾಗಿ ನೀರು ಪೂರೈಸುವ ಸಂಗತಿಯು ನಿಜವೇ ?

(ಡಿ) ಹಾಗಿದ್ದಲ್ಲಿ ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಪ್ರಸ್ತುತ ಯೋಜನೆಯನ್ನಿ ಯಾವಾಗ ಕೈಗೆತ್ತಿಕೊಳ್ಳಲ್ಪಡುವುದು.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು).—

(ಎ) ಬಂದಿದೆ.

(ಬಿ) ಕುಪ್ಪೇಲೂರು.—ಈ ಗ್ರಾಮದ ಪೂರ್ವಭಾಗದಲ್ಲಿ ಕುಡಿಯಲು ಯೋಗ್ಯವಾದ ನೀರು ಗಂಟೆಗೆ ೩೦೨೦ ಲೀ. ಇಳುವರಿಯಾಗುತ್ತಿದೆ. ಗ್ರಾಮದ ಉತ್ತರ ಪಶ್ಚಿಮ ದಕ್ಷಿಣ ಭಾಗಗಳಲ್ಲಿ ಸವಳು ನೀರು ಇಳುವರಿಯಾಗಿರುತ್ತದೆ.

ಲಿಂಗದಹಳ್ಳಿ.—ಈ ಗ್ರಾಮವು ಸವಳು ಪ್ರದೇಶದಲ್ಲಿ ಬರುತ್ತದೆ. ಈ ಗ್ರಾಮದ ಸುತ್ತ ಮುತ್ತಲು ೩-೪ ಕಿ.ಮೀ. ಪರಿಧಿಗೆ ಕುಡಿಯಲು ಯೋಗ್ಯವಾದ ನೀರು ದೊರಕುವ ಸಾಧ್ಯತೆ ಇರುವುದಿಲ್ಲ. ಈಗಾಗ್ಗೆ ಈ ಗ್ರಾಮಗಳಲ್ಲಿ ತೋಡಿದ ಭಾವಿಗಳಲ್ಲಿಯೂ ಸವಳು ನೀರು ದೊರೆತಿದೆ.

(ಸಿ) ಹೌದು.

(ಡಿ) ಆದಷ್ಟು ಶೀಘ್ರದಲ್ಲಿ ಕೈಗೆತ್ತಿಕೊಳ್ಳಲಾಗುವುದು.,

Water Supply Scheme to Nittur Village of Harapanahalli Tuluk

1508. SRI. B. H. YENKANAYAK (Harapanahalli).—Will the Minister for Rural Development and Panchayatraj and Wakfs be pleased to state.

a) Whether it has come to the notice of Goverment that there is no water supply Scheme in Nittur Village of Harapanahalli Taluk.

b) Whether it is a fact that the Villagers are using water of T.B. river during summer which is polluted water